

# ಶಾಲೆಗೆ ಸೇರಿದ ಪೋರಿ ಇಂದ್ರಾಗಾಂಧಿ

ಶಿವಣ್ಣ ಅಲ್ಲಿ ನೋಡಿದ. ಈಗ ಅದು ನಿರ್ಜನವಾಗಿತ್ತು. ಪಾಳು ಬಿದ್ದ ಹಳೇ ಕಟ್ಟಡ, ಹಸುಗಳಿಗಾಗಿ ಕಟ್ಟಿಸಿದ್ದ ಶೆಡ್ಡುಗಳ ಮುರುಕಲು ಅವಶೇಷ, ಗಿಡ ಗಂಟಿಗಳು, ಮುರಿದುಬಿದ್ದ ತಂತಿ ಬೇಲಿಗಳೆಲ್ಲಾ ಅವನಲ್ಲಿ ಪ್ರಶ್ನೆ ಎಬ್ಬಿಸಿದವು.

'ಆ ಕಾಲ ಛಲೋ ಇತ್ತು ಅಲ್ಲೇನ್ರಿ...? ಅದ್ರ ನೆನಪು ಕಾಡ್ಲಿಕ್ಕೆ ಹತ್ತೇನ...?' ನಾಲ್ಕು ಹೆಜ್ಜೆ ದೂರಕ್ಕೆ ಗಂಗೆ ಸ್ಥಳವೂ ಎದುರಾಯಿತು. ಪ್ರಸಾದ ಅವನಿಗೆ ಉತ್ತರಿಸುವಷ್ಟರಲ್ಲಿ ಸಣ್ಣ ಮಗುವಿನ ದನಿ ಕೇಳಿಬಂದಿತು. ಅರಸೂ ಬಂಗ್ಲೆ ಕಾಂಪೋಂಡಿನಲ್ಲಿ ಹೂವು ಆರಿಸುತ್ತಿತ್ತು ಪಾಪು. ಈ ಇಬ್ಬರನ್ನು ಕಂಡ ಕೂಡಲೆ ಹೂವನ್ನು ಮರೆತು ಓಡಿದಾಗ, ಹಿಂದಿನಿಂದ ಗಂಗೆಯೂ ಕಂಡಳು. ಗಂಟಲು ನೋವಿನಿಂದ ಪಾರಾದ ಪಾಪು ಈಗ ಎಂದಿನ ಪಾದರಸವೇ ಆಗಿಬಿಟ್ಟಿದ್ದು. ಕೈಲಿ ಹಿಡಿದು ಕೊಳ್ಳಲಾರದ ಪಾದರಸ!

'ಅವ್ವಾ...! ನೋಡವ್ವಾ... ಕಹಿ ಔಷಧಿ ಮಾಮ!'

ಶಿವಣ್ಣ ಮೆಲ್ಲನೆ ಪಿಸುಗುಟ್ಟಿದ. 'ಪ್ರಸಾದಪ್ಪಾ... ನೋಡ್ರೀ ಆ ಕೂಸನ್ನ ಹಡದಾಕೀನಾ...! ತಂದೆ ಯಾರೂ ಅಂತ ಹೇಳದ